3. ಸದರಿ ದರಖಾಸ್ತುಗಳಲ್ಲಿ ದರ್ಖಾಸ್ತುದಾರರು ಸದರಿ ಪದಾರ್ಥಗಳನ್ನು ಸ್ವಾತಂತ್ರ್ಯವಾಗಿ ಮಾರುವದಕ್ಕೆ ಸರ್ಕಾರಕ್ಕೆ ಸಾಲಿಯಾನ ಇಷ್ಟೇ ತೆರಿಗೆ ಕೊಡುತ್ತೇನೆಂಬದಾಗಿ ನಮ್ಮೂದಿಸಬೇಕು. ಕೊಡಬೇಕಾದ ತೆರಿಗೆಯನ್ನು ಪ್ರತಿ ವರುಷದ ಅಂದರೆ ಜೂಲೈ, ಅಕ್ಟೋಬರ್, ಜನವರಿ, ಈ ಮಾಹೆಗಳ 1ನೇ ತಾರೀಖಿನ ದಿವಸ ಪಾವತಿ ಮಾಡತಕ್ಕದ್ದು.

4. ದರ್ಖಾಸ್ತುಗಳು 1903ನೇ ಇಸವಿ ಮಾರ್ಚಿ ತಾರೀಖು 6ನೇ ಶುಕ್ರವಾರ ಮಧ್ಯಾನ್ನ ಮಡಿಕೇರಿಯಲ್ಲಿ ಹಾಜರಿರುವ ದರ್ಖಾಸ್ತುದಾರರುಗಳ ರೂಬರೂ ಕಮಿಷನರವರಿಂದ ಅಥವಾ ಅವರ ಗೈರ್‌ಹಾಜರಿಯಲ್ಲಿ ಅಸಿಸ್ಟೆಂಟ್ ಕಮಿಷನರವರಿಂದ ಖುಲ್ಲಾ ಮಾಡಲ್ಪಡುವವು. ದರ್ಖಾಸ್ತುಗಳ ಆಬ್ಜೆರ್ವೇವನ್ಸೆಯು ಕೊಡಗು ಚೀಫ್ ಕಮಿಷನರವರಿಗೆ ಹೊಂದಿರುತ್ತೆ ವ.ತ್ತು ಅವರು ಯಾವ ಕಾರಣವೂ ನಮೂದಿಸದೆ ಯಾವದೊಂದು ಯಾ, ಎಲ್ಲಾ ದರ್ಖಾಸ್ತುಗಳನ್ನು ತಿರಸ್ಕರಿಸುವ ಎಲ್ಲಾ ಸ್ವಾತಂತ್ರ್ಯವನ್ನು ತಮಗೇನೆ ಉಳಿಸಿಕೊಂಡಿರುತ್ತಾರೆ. ಯಾರ ದರ್ಖಾಸ್ತುಗಳು ತಿರಸ್ಕರಿಸಲ್ಪಡುತ್ತವೋ ಅಂಥಾ ದರ್ಖಾಸ್ತುದಾರರಿಂದ ಹಾಜರ್ಮಾಡಲ್ಪಟ್ಟ ಠೇವಣಿ ಮೊಬಲಗು ಅವರಿಗೇನೆ ವಾಪಸ್ಮಾಡಲ್ಪಡುವದು.

5. ಚೀಫ್ ಕಮಿಷನರವರಿಂದ ಯಾವ ದರ್ಖಾಸ್ತು ಮಂಜೂರ್ಮಾಡಲ್ಪಡುತ್ತದೋ ಅಂಥಾ ದರ್ಖಾಸ್ತುದಾರನು ಮೊದಲು ಕೊಟ್ಟಿರುವ ಠೇವಣಿ ದೇಖಿಲ್ ಸಾಲಿಯಾನದ ಬರವಕ ಕೊಟ್ಟಿರುವ ತೆರಿಗೆ ಮೊಬಲಗು ಪೈಕಿ ಅರ್ಧ ವರುಷಕ್ಕೆ ಸರಿಯಾಗುವಷ್ಟು ಮೊಬಲಗನ್ನು 3 ದಿವಸದ ಪಳಗಾಗಿ ನಗದು ಆಗಲೀ, ಕರ್ಸಿ ನೋಟ್ ಮೂಲಕವಾಗಲೀ, ಅಥವಾ ಗವರ್ನಮೆಂಟ್ ಪ್ರಾಮಿಸರಿ ನೋಟ್ ಮೂಲಕವಾಗಲೀ, ಠೇವಣಾತಿ ಇಡತಕ್ಕದ್ದು. ಈ ಡಿಪಾಜಿಟ್ ಹಣವನ್ನು 1906ನೇ ಇಸವಿ ಮಾರ್ಚಿ ತಾರೀಖು 31ಕ್ಕೆ ಮುಗಿಯುವ ಅರ್ಧ ವರುಷಕ್ಕೆ ಸಲ್ಲಬೇಕಾದ ಕಿಸ್ತಿಗೆ ಹಿಂದಲಿಂದ ಸರ್ಕಾರಕ್ಕೆ ವಜಾ ಮಾಡಿಕೊಳ್ಳಲ್ಪಡುವದು ಮತ್ತು ಚೀಫ್ ಕಮಿಷನರವರಿಂದ ಮಂಜೂರ್ಮಾಡಲ್ಪಟ್ಟ ತಾರೀಖಿನಿಂದ 10 ದಿವಸದ ಪಳಗಾಗಿ ಸದರಿ ದರ್ಖಾಸ್ತುದಾರನು 1878ನೇ ಇಸವಿ ನಂಬರ್ 1ರ ಆಫೀಮು ಆಕ್ಟಿನ ರೂಲ್ಸ್ ಮೇರೆ ನಡದುಕೊಳ್ಳುವದಕ್ಕೆ ಬದ್ಧನಾಗಿರುತ್ತೇನೆಂಬದಾಗಿ ನೇಮಕವಾದ ನಮೂನೆಯಲ್ಲಿ ಛಾಪಾಕಾಗದದಲ್ಲಿ ಬಂದು ಬಡಂಬಡಿಕೆಯನ್ನು ಬರದು ಕೊಡಬೇಕು ಮತ್ತು ಅದರಲ್ಲಿ ಕಂಡ ಪರತ್ತು ಪ್ರಕಾರ ನಡದುಕೊಳ್ಳುವದಕ್ಕೋಸ್ಕರ ಜಾಮೀನ್ ಸಹ ಕೊಡತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮೊದಲು ಕೊಟ್ಟಿರುವ ಠೇವಣಾತಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಟ್ಟು ಸದರೀ ಕಂಟ್ರಾಕ್ಟು ಬೇರೆ ವಿಧವಾಗಿ ವ್ಯವಸ್ತೆ ಮಾಡಲ್ಪಡುವದು.

6. ಕಂಟ್ರಾಕ್ಟುದಾರನು ಸಲಿಕೆ ಮಾಡಬೇಕಾಗುವ ತಾರೀಖಿಗೆ ಸರಿಯಾಗಿ ಯಾವ ಖಿಸ್ತಿನಲ್ಲಾಗಲೀ ಮೊಬಲಗು ಕಟ್ಟುವದಕ್ಕೆ ತಪ್ಪಿದ ಪಕ್ಷದಲ್ಲಿ ಆ ಕೂಡಲೆ ಕಂಟ್ರಾಕ್ಟನ್ನು ರದ್ದು ಮಾಡುವದಕ್ಕೂ ಠೇವಣಿ ಹಣವನ್ನು ಜಪ್ತಿ ಮಾಡಿ ಸದರೀ ಗುತ್ತಿಗೆಯನ್ನು ಕಂಟ್ರಾಕ್ಟುದಾರನ ಜವಾಬ್ದಾರಿಯೂ, ನಷ್ಟದಮೇಲೆ ಪುನಹ ಹರಾಜು ಮಾಡುವದಕ್ಕೆ ಕೊಡಗು ಕಮಿಷನರವರು ಸ್ವತಂತ್ರರಾಗಿರುತ್ತಾರೆ.

7. ಕೊಡಗು ದೇಶದಲ್ಲಿ ಮೇಲ್ಕಂಡ ಪದಾರ್ಥಗಳನ್ನು ಮಾರುವದಕ್ಕೆ ತಾಲ್ಲೂಕ್ ಅಂಗಡಿಗಳು ನೇಮಕ ಮಾಡಲ್ಪಟ್ಟವೆ. ಮಡಿಕೇರಿ ಮಹದೇವಪ್ಯಾಟೆಯಲ್ಲಿ ಬಂದು, ವೀರಾಜೇಂದ್ರ ಪ್ಯಾಟೆಯಲ್ಲಿ ಬಂದು, ಗೋಣಿಕೊಪ್ಪಲ್ಲಿ ಬಂದು ಮತ್ತು ಸೋಮವಾರ ಪ್ಯಾಟೆಯಲ್ಲಿ ಬಂದು.

8. ಮೇಲ್ಕಂಡ 7ನೇ ಕಲಂನಲ್ಲಿ ನಮೂದಿಸಿರುವ ಅಂಗಡಿಗಳ ವಿನಹ ಕಮಿಷನರವರ ಸ್ಪೆಷಲ್ ಅಪ್ಪಣೆ ಸಿವಾಯಿ ಹೆಚ್ಚು ಅಂಗಡಿಗಳಿರಕೂಡದು.

9. ಮೇಲೆ ನಮೂದಿಸಲ್ಪಟ್ಟಿರುವ ಅಂಗಡಿಗಳಲ್ಲಿ ಚಿಲ್ಲರೆ ಬಿಕರಿ ಮಾಡುವದಕ್ಕೋಸ್ಕರವಾಗಿ ಗುತ್ತಿಗೆದಾರನಿಂದ ಇಡಲ್ಪಟ್ಟ ಜನಗಳಿಗೆ ಖಾರ್ನೂನಿಂದ ನೇಮಕ ಮಾಡಲ್ಪಟ್ಟ ನಮೂನೆಯಲ್ಲಿ ಕೊಡಗು ಕಮಿಷನರವರಿಂದ ಮಂಜೂರ್ ಮತ್ತು ಕೌಂಟರ್‌ಸೈನ್ ಮಾಡಿ ಕೊಡೋಣಾದ ಲೈಸೆನ್ಸಗಳನ್ನು ಕೊಟ್ಟಿರತಕ್ಕದ್ದು.

10. ಮಾರುವದಕ್ಕೆ ಬೇಕಾಗುವ ಅಫೀಮನ್ನು ಕೊಡಗುದೇಶದ ಕಮಿಷನರವರ ಮೂಲಕ ಚೀಫ್ ಕಮಿಷನರವರು ವೆಚ್ಚಕರೂಪ್ಮಾಡಿರುವ ಕ್ರಯ ಕೊಟ್ಟು ತರಿಸಿಕೊಳ್ಳಬೇಕು. ಕಂಟ್ರಾಕ್ಟು ವಾಯಿದೆ ಮುಗಿದ ಬಳಿಕ ಮೊದಲಿನ ಕಂಟ್ರಾಕ್ಟುದಾರನಲ್ಲಿ ಕರ್ಚಾಗದೆ ಬಾಕಿ ಇರುವಂಥಾ ಅಫೀಮನ್ನು, ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳನ್ನು ಮತ್ತು ಹೊಗೆ ತೆಗಿಯುವದಕ್ಕೋಸ್ಕರ ಉಪಯೋಗಿಸಲ್ಪಡುವ ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳಲ್ಲದೆ ಕಸಕಸೆಯಿಂದ ತಯಾರಾದ ನಿಷ್ಠಾವಸ್ತುಗಳನ್ನು ಎರಡು ತಿಂಗಳಿಗೆ ಬೇಕಾದಷ್ಟರಲ್ಲಿ ಕಮಿಷನರವರಿಂದ ತೀರ್ಮಾನಿಸಲ್ಪಡುವ ಖರೀದಿಗೆ ಮತ್ತು ಅವರಿಂದ ಎಷ್ಟೆಷ್ಟು ಎಂಬದಾಗಿ ನಿರ್ಣಯಿಸಲ್ಪಡುತ್ತದೋ ಅಷ್ಟೆಷ್ಟನ್ನು ಕೊಂಡುಕೊಳ್ಳಬೇಕೆಂದು ಕಮಿಷನರವರಿಂದ ಅಪ್ಪಣೆ ಕೊಡಲ್ಪಟ್ಟರೆ ಕೊಂಡುಕೊಳ್ಳುವದಕ್ಕೆ ಹೊಸ ಕಂಟ್ರಾಕ್ಟುದಾರನು ಬದ್ಧನಾಗಿರಬೇಕು.

11. ಇನ್ನು ಹೆಚ್ಚಿಗೆ ಬೇಕಾಗುವ ತಪ್ಸೀಲ್‌ಗಳನ್ನು ಮಡಿಕೇರಿಯಲ್ಲಿ ಕೊಡಗು ಕಮಿಷನರವರಲ್ಲಿ ದರ್ಖಾಸ್ತು ಮಾಡಿ ತಿಳಿದುಕೊಳ್ಳಬಹುದು.

"ಹುಕುಂ ಬಮೋಜೀಬ್"
ಆರ್. ಸಿ. ಎಚ್. ಎಂ. ಕಿಂಗ್,
ಚೀಫ್ ಕಮಿಷನರವರ ಸೆಕ್ರಿಟರಿಯವರು.

ಬೆಂಗಳೂರು–ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ, ಲಿಮಿಟೆಡ್.

ಸ್ ಈ 1895ನೇ ಇಸವಿಯ ಮೂರನೇ ನಂಬರು ರೆಗ್ಯುಲೇಷನ್ ಆದ ಮೈಸೂರ ಕಂಪನಿಸ್ ಆಕ್ಟು ಅನುಸರಿಸಿ ರಿಜಸ್ಟರ್ ಮಾಡಲ್ಪಟ್ಟಿದೆ.

ಇದರ ಬಂಡವಾಳ 5,00,000 ರೂಪಾಯಿಗಳು. ಷೇರು 1ಕ್ಕೆ 25 ರೂಪಾಯಿಗಳಂತೆ 20,000 ಷೇರುಗಳು. ಅಪ್ಲಿಕೇಷನ್ನೊಡನೆ 5 ರೂಪಾಯಿಗಳು, ಷೇರುಗಳು ಹಂಚಿದಕೂಡ್ಲೆ 5 ರೂಪಾಯಿಗಳು, ಬಾಕಿ 15 ರೂಪಾಯಿಗಳು ಕಾಲ್ ಬಂದಕ್ಕೆ 5 ರೂಪಾಯಿಗಳಂತೆ ಪಾವತಿ ಮಾಡತಕ್ಕದ್ದು.

ಕಂಪನಿಯ ಷೇರುಲಿಸ್ಟು ಸಿದ್ಧವಾಗಿರುವದು. ಹಣವು ಬೆಂಗಳೂರಿನಲ್ಲಿರುವ ಮದರಾಸ್ ಬ್ಯಾಂಕಿಗಾಗಲಿ ಅಥವಾ ಮ್ಯಾನೇಜಿಂಗ್ ಡೈರೆಕ್ಟರಿಗಾಗಲಿ ಕಳುಹಿಸಿ ರಸೀತಿ ಪಡೆಯಬಹುದು.

ಷೇರುಗಳು ಮೈಸೂರು ಸೀಮೆಯಲ್ಲಿ ವಾಸಮಾಡುವವರಿಗು ಮತ್ತು ಅನ್ಯದೇಶದಲ್ಲಿ ವಾಸಿಸುತ್ತಿರುವ ಈ ದೇಶಿಯರಿಗು ಕೊಡಲ್ಪಡುವದು. ಪ್ರಕಟನೆ ಪತ್ರಿಕೆಗಳು ಮತ್ತು ಇತರ ತಪಸೀಲುಗಳು ಸಹಾ ಇದರಡಿ ಸೈನ್ ಮಾಡಿರುವವರಿಂದ ತರಿಸಿಕೊಳ್ಳಬಹುದು.

ಏ ಸುಬ್ಬರಾವ್,
ಮ್ಯಾನೆಜಿಂಗ್ ಡೈರೆಕ್ಟರ್,
ಬೆಂಗಳೂರು–ಚಿಕ್ಕಬಳ್ಳಾಪುರ ಲೈಟ ರೈಲ್ವೆಕಂಪನಿ, ಲಿಮಿಟೆಡ್,
68ನೇ ನಂಬರು, 2ನೇ ಬೀದಿ, ಚಾಮರಾಜಪ್ಯಾಟೆ, ಬೆಂಗಳೂರು.

Mysore Government Central Press, Bangalore—1903.